# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯ ಸರ್ಕಾರದ ತೆಂಗಿನ ನಾರಿನ ಉದ್ಯಮಕ್ಕೆ ನೆರವು – ತೆಂಗು ಭಾಗ್ಯ ಯೋಜನೆ ಕಾರ್ಯಕ್ರಮಗಳಿಗೆ ಮಾರ್ಗಸೂಚಿಗಳನ್ನು ಮರುರೂಪಿಸುವ ಕುರಿತು.

**ಓದಲಾಗಿದೆ:** ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಪತ್ರ ಸಂಖ್ಯೆ: ಕೈವಾಇ/ವಿಶ್ವ/ಎ2/ತೆಂನಾನೆ/ಮಾಸೂ/2016-17/16, ದಿನಾಂಕ: 15.06.2016 ಮತ್ತು 06.07.2016.

*****

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಧೀನದಲ್ಲಿ ಬರುವ ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿ., ಮತ್ತು ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮಗಳು ರಾಜ್ಯಾದ್ಯಂತ ತೆಂಗಿನ ನಾರು ಮತ್ತು ನಾರಿನ ಸಿದ್ಧವಸ್ತುಗಳನ್ನು ತಯಾರಿಸುವ ಘಟಕಗಳನ್ನು ಹೊಂದಿದ್ದು, ಈ ಘಟಕಗಳಲ್ಲಿ ಸ್ಥಾಪಿಸಿರುವ ಯಂತ್ರೋಪಕರಣಗಳನ್ನು ಸತತವಾಗಿ ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಯಂತ್ರಗಳು ಸವೆಯುವುದು ಮತ್ತು ಕೆಲವು ಬಿಡಿಭಾಗಗಳನ್ನು ಆಗಿಂದಾಗ್ಗೆ ಬದಲಾಯಿಸುವುದು ಅಗತ್ಯವಿರುತ್ತದೆ. ಕೆಲವೊಂದು ಸಂದರ್ಭಗಳಲ್ಲಿ ಈ ಕೈಗಾರಿಕೆಗಳಲ್ಲಿ ಉಪಯೋಗಿಸುವ ಯಂತ್ರಗಳನ್ನು ತಾಂತ್ರಿಕವಾಗಿ ಅಭಿವೃದ್ಧಿಪಡಿಸಿ ಉತ್ಪಾದನೆಯನ್ನು ಹೆಚ್ಚಿಸಲು ಸೂಕ್ತ ರೀತಿಯಲ್ಲಿ ವಿನ್ಯಾಸಗೊಳಿಸಿದ ಯಂತ್ರಗಳನ್ನು ಮತ್ತು ಹೊಸ ತಂತ್ರಜ್ಞಾನವನ್ನು ಅಳವಡಿಸುವುದು, ಕಟ್ಟಡಗಳ ಆಧುನೀಕರಣಗೊಳಿಸುವುದು ಹಾಗೂ ತೆಂಗಿನ ನಾರಿನ ಕುಶಲಕರ್ಮಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ನೀಡಿ ಸ್ವಾವಲಂಬಿಗಳನ್ನಾಗಿ ಮಾಡುವುದು ಅವಶ್ಯಕತೆ ಇರುತ್ತದೆ. ಇದರಿಂದ ಗ್ರಾಮೀಣ ಪ್ರದೇಶದ ತೆಂಗಿನ ನಾರಿನ ಕುಶಲಕರ್ಮಿಗಳಿಗೆ ಉದ್ಯೋಗಾವಕಾಶವನ್ನು ಹೆಚ್ಚಿಸುವುದಲ್ಲದೆ ಅವರ ದಿನನಿತ್ಯದ ಆದಾಯವನ್ನು ಸಹ ವೃದ್ಧಿಸಿಕೊಂಡು ನಿರಂತರವಾಗಿ ಉದ್ಯೋಗವನ್ನು ಕಲ್ಪಿಸಲಾಗುತ್ತಿರುತ್ತದೆ. ಈ ಸಂಸ್ಥೆಗಳಿಗೆ ರಾಜ್ಯ ಸರ್ಕಾರದಿಂದ ತೆಂಗಿನ ನಾರಿನ ವಲಯಕ್ಕೆ ನೆರವು ಯೋಜನೆಯ ಲೆಕ್ಕಶೀರ್ಷಿಕೆ 2851-00-106-0-12 (059) ಇತರೆ ವೆಚ್ಚಗಳು ಅಡಿಯಲ್ಲಿ ಅನುದಾನವನ್ನು ನೀಡಲಾಗುತ್ತಿದ್ದು, ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು, ಕೈಗಾರಿಕಾಭಿವೃದ್ಧಿ ಮತ್ತು ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಮಾರ್ಗಸೂಚಿಗಳನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಐ 112 ಸಿಎಸ್‌ಸಿ 2016 (ಭಾಗ–3), ಬೆಂಗಳೂರು, ದಿನಾಂಕ: 30.08.2016**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ವಯ, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ಮತ್ತು ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮಗಳು ರಾಜ್ಯಾದ್ಯಂತ ತೆಂಗಿನ ನಾರು ಮತ್ತು ನಾರಿನ ಸಿದ್ದವಸ್ತುಗಳನ್ನು ತಯಾರಿಸುವ ಘಟಕಗಳನ್ನು ಹೊಂದಿದ್ದು, ಈ ಘಟಕಗಳ ಕಟ್ಟಡ ಮತ್ತು ಯಂತ್ರೋಪಕರಣಗಳ ನವೀಕರಣ / ದುರಸ್ಥಿಗಾಗಿ, ಹೊಸ ಯಂತ್ರಗಳ ಖರೀದಿ ಹಾಗೂ ತರಬೇತಿ ಕಾರ್ಯಕ್ರಮಗಳಿಗೆ "ತೆಂಗಿನ ನಾರಿನ ಉದ್ಯಮಕ್ಕೆ ನೆರವು"– ತೆಂಗು ಭಾಗ್ಯ ಯೋಜನೆಯಡಿ ನೀಡಲಾಗುತ್ತಿರುವ ಅನುದಾನಕ್ಕೆ ಮತ್ತು ಅದರ ಸದ್ಬಳಕೆಗೆ ಈ ಆದೇಶದಲ್ಲಿ ಮರು ರೂಪಿಸಿದ ಮಾರ್ಗಸೂಚಿಗಳಿಗೆ ಅನುಮೋದನೆ ನೀಡಲಾಗಿದೆ.

ಈ ಯೋಜನೆಯ ಅನುಷ್ಠಾನವನ್ನು ಈ ಆದೇಶದಲ್ಲಿ ಅನುಮೋದಿಸಲಾಗಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸತಕ್ಕದ್ದು.

**ಯೋಜನೆಯ ಹೆಸರು** : <u>ತೆಂಗಿನ ನಾರಿನ ಉದ್ಯಮಕ್ಕೆ ನೆರವು – ತೆಂಗು ಭಾಗ್ಯ</u>

**ಲೆಕ್ಕಶೀರ್ಷಿಕೆ** : 2851–00–106–0–12 (059) ಇತರೆ ವೆಚ್ಚಗಳು

**ಹಿನ್ನೆಲೆ:**

ಕರ್ನಾಟಕ ರಾಜ್ಯ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಧೀನದಲ್ಲಿ ಬರುವ ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ಮತ್ತು ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ದಿ ನಿಗಮ ರಾಜ್ಯಾದ್ಯಂತ ತೆಂಗಿನ ನಾರು ಮತ್ತು ನಾರಿನ ಸಿದ್ದವಸ್ತುಗಳನ್ನು ತಯಾರಿಸುವ ಘಟಕಗಳನ್ನು ಹೊಂದಿದ್ದು, ಈ ಘಟಕಗಳ ಕಟ್ಟಡ ಮತ್ತು ಯಂತ್ರೋಪಕರಣಗಳ ನವೀಕರಣ ಮತ್ತು ದುರಸ್ಥಿಗಾಗಿ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ.

**ಯೋಜನೆಯ ಮಾರ್ಗಸೂಚಿಗಳು:**

ಅ) **ಅನುಷ್ಠಾನ ಸಂಸ್ಥೆಗಳು:**

- ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ
- ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ

ಆ) **ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ:**

- ನಿಗಮದ ಉತ್ಪಾದನಾ ಘಟಕಗಳಲ್ಲಿ ತೆಂಗಿನ ನಾರಿನ ಉತ್ಪನ್ನಗಳ ತಯಾರಿಕೆಯಲ್ಲಿ ಗ್ರಾಮೀಣ ನಿರುದ್ಯೋಗಿಗಳಿಗೆ ಅದರಲ್ಲಿ ಮಹಿಳೆಯರಿಗೆ ಆದ್ಯತೆ ನೀಡಿ ಆಯ್ಕೆ ಮಾಡಿ, ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ತಗಲುವ ವೆಚ್ಚದ ಹಾಗೂ ವಿವರಗಳನ್ನು ಈ ಕೆಳಕಂಡಂತೆ ನಿಗಧಿಪಡಿಸಿದೆ.

| | | |
|---|---|---|
| ಅ) ಶಿಷ್ಯವೇತನ | | ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 1,500/- ರಂತೆ |
| ಆ) ಬೋಧಕರ ಗೌರವಧನ | | ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 300/- ರಂತೆ (ಒಬ್ಬ ಬೋಧಕರಿಗೆ ಗೌರವಧನ ಮಾಹೆಯಾನ 10 ಅಭ್ಯರ್ಥಿಗಳ ತಂಡಕ್ಕೆ ಗರಿಷ್ಠ ರೂ. 3,000/- ಗಳಿಗೆ ಮಿತಿಗೊಳಿಸಿದೆ). |
| ಇ) ತರಬೇತಿಗಾಗಿ ಕಚ್ಚಾ ಸಾಮಾಗ್ರಿ | | ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 500/- ರಂತೆ |
| ಈ) ಸುಧಾರಿತ ಉಪಕರಣಗಳು | | ತರಬೇತಿ ಪೂರೈಸಿದ ಪ್ರತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮಾತ್ರ ರೂ. 5,000/- ಗಳವರೆಗೆ ಸಂಬಂಧಪಟ್ಟ ಚಟುವಟಿಕೆಯಲ್ಲಿ ಉಚಿತ ಸುಧಾರಿತ ಉಪಕರಣಗಳನ್ನು ನೀಡಲಾಗುವುದು. |
| ಉ) ತರಬೇತಿ ಅವಧಿ | | 04 ತಿಂಗಳು |
| ಊ) ತರಬೇತಿ ವೆಚ್ಚ | ಸಾಮಾನ್ಯ ವರ್ಗ | ಅ) 04 ತಿಂಗಳ ತರಬೇತಿಗೆ ಪ್ರತಿ ಅಭ್ಯರ್ಥಿಗೆ ಒಟ್ಟು ತರಬೇತಿ ವೆಚ್ಚ ರೂ. 9,200/- + ನಿರ್ವಹಣೆ ವೆಚ್ಚ ಶೇ. 10 ರಷ್ಟು ರೂ. 920/- ಹೀಗೆ ಒಟ್ಟು ರೂ. 10,120/- |
| | ಪ.ಜಾ/ ಪ.ಪಂ. | ಆ) 04 ತಿಂಗಳ ತರಬೇತಿಗೆ ಪ್ರತಿ ಅಭ್ಯರ್ಥಿಗೆ ಒಟ್ಟು ತರಬೇತಿ ವೆಚ್ಚ ರೂ. 9,200/- + ನಿರ್ವಹಣೆ ವೆಚ್ಚ ಶೇ. 10 ರಷ್ಟು ರೂ. 920/- + ಉಪಕರಣಗಳ ಮೊತ್ತ ರೂ. 5,000/- ಹೀಗೆ ಒಟ್ಟು ರೂ. 15,120/- (ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಉಪಕರಣ ಒಳಗೊಂಡಂತೆ) |

➢ ನಿಗಮದ ಉತ್ಪಾದನಾ ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತೆಂಗಿನ ನಾರಿನ ಕೆಲಸಗಾರರಿಗೆ ಹೆಚ್ಚು ಗುಣಮಟ್ಟದ ಉತ್ಪನ್ನಗಳ ತಯಾರಿಕೆಗೆ ಅನುವಾಗುವಂತೆ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ತಗಲುವ ವೆಚ್ಚ ಮತ್ತು ವಿವರಗಳನ್ನು ಈ ಕೆಳಕಂಡಂತೆ ನಿಗಧಿಪಡಿಸಿದೆ.

| | |
|---|---|
| ಅ) ಶಿಷ್ಯವೇತನ | ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 1,500/- (ಖಾಯಂ ಸಿಬ್ಬಂದಿಗಳು ಶಿಷ್ಯವೇತನಕ್ಕೆ ಅರ್ಹರಾಗಿರುವುದಿಲ್ಲ). |
| ಆ) ಬೋಧಕರ ಗೌರವಧನ | ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 300/- ರಂತೆ (ಒಬ್ಬ ಬೋಧಕರಿಗೆ ಗೌರವಧನ ಮಾಹೆಯಾನ 10 ಅಭ್ಯರ್ಥಿಗಳ ತಂಡಕ್ಕೆ ಗರಿಷ್ಠ ರೂ. 3,000/- ಗಳಿಗೆ ಮಿತಿಗೊಳಿಸಿದೆ). |
| ಇ) ತರಬೇತಿಗಾಗಿ ಕಚ್ಚಾ ಸಾಮಾಗ್ರಿ | ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 1500/- ರಂತೆ |
| ಈ) ತರಬೇತಿ ಅವಧಿ | 02 ತಿಂಗಳು |
| ಉ) ತರಬೇತಿ ವೆಚ್ಚ | ನಿರ್ವಹಣಾ ವೆಚ್ಚ ಶೇ. 10 ರಂತೆ ರೂ. 660ಗಳು ಸೇರಿ 02 ತಿಂಗಳ ತರಬೇತಿಗೆ ಪ್ರತಿ ಅಭ್ಯರ್ಥಿಗೆ ಒಟ್ಟು ತರಬೇತಿ ವೆಚ್ಚ ರೂ. 7,260/- (ಎಲ್ಲಾ ವರ್ಗದವರಿಗೆ) |

ಮೇಲೆ ತಿಳಿಸಿದ ಎಲ್ಲಾ ತರಬೇತಿ ಕಾರ್ಯಕ್ರಮಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಹಾಗೂ ಅದರಡಿ ರೂಪಿಸಿರುವ ನಿಯಮಗಳು ಅನ್ವಯಿದಲ್ಲಿ ಅದನ್ನು ತಪ್ಪದೇ ಪಾಲಿಸಿ ಅನುಷ್ಠಾನಗೊಳಿಸತಕ್ಕದ್ದು.

ಇ) **ನಿಗಮದ ಉತ್ಪಾದನಾ ಘಟಕಗಳಲ್ಲಿನ ಯಂತ್ರೋಪಕರಣಗಳ ದುರಸ್ಥಿ ಮತ್ತು ನಿರ್ವಹಣೆ ಸಹಾಯ:**

ನಿಗಮದ ಬಹುತೇಕ ಉತ್ಪಾದನಾ ಘಟಕಗಳಲ್ಲಿ ಅಳವಡಿಸಲಾಗಿರುವ ಯಂತ್ರಗಳು ಹಳೆಯದಾಗಿದ್ದು, ನಿರಂತರ ಉತ್ಪಾದನೆಯಲ್ಲಿ ತೊಡಗಿರುವುದರಿಂದ, ಆಗ್ಗಿಂದಾಗ್ಗೆ ದುರಸ್ಥಿಗೆ ಒಳಪಡಬಹುದು. ಈ ರೀತಿ ದುರಸ್ಥಿಗೆ ಒಳಪಡುವ ಯಂತ್ರಗಳ ದುರಸ್ಥಿ ವೆಚ್ಚವನ್ನು ನಿಗಮದ ಆರ್ಥಿಕ ಪರಿಸ್ಥಿತಿಯಲ್ಲಿ ಭರಿಸಲು ಕಷ್ಟವಾಗುವ ಸಂದರ್ಭದಲ್ಲಿ ದುರಸ್ಥಿಯನ್ನು ಸಕಾಲದಲ್ಲಿ ಕೈಗೊಳ್ಳದೇ ಇದ್ದ ಪಕ್ಷದಲ್ಲಿ ಉತ್ಪಾದನೆ ಕುಂಠಿತಗೊಳ್ಳುವುದಲ್ಲದೇ, ಕೆಲಸಗಾರರಿಗೆ ಕೆಲಸವಿಲ್ಲದಂತಾಗಿ, ನಿಗಮದ ಉತ್ಪಾದನಾ ಘಟಕಗಳನ್ನು ತೊರೆದು ಬೇರೆ ಕೈಗಾರಿಕೆಗಳಿಗೆ ವಲಸೆ ಹೋಗಬಹುದು. ಇದರಿಂದ, ನಿಗಮ ಆರ್ಥಿಕ ನಷ್ಟಕ್ಕೆ ಕಾರಣವಾಗುವುದು. ಈ ನಿಟ್ಟಿನಲ್ಲಿ ದುರಸ್ಥಿಗೆ ಒಳಪಡುವ ಯಂತ್ರಗಳನ್ನು ಸಕಾಲದಲ್ಲಿ ದುರಸ್ಥಿಗೊಳಿಸಿ, ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳಲು ಇದಲ್ಲದೇ, ಯಂತ್ರೋಪಕರಣಗಳಿಗೆ ಅಳವಡಿಸಿರುವ ವೈರುಗಳು ಹಳೆಯದಾಗಿರುವುದರಿಂದ, ಕೆಲವು ಸಂದರ್ಭಗಳಲ್ಲಿ ಶಾರ್ಟ್‌ಸರ್ಕ್ಯೂಟ್ ಆಗುವ ಸಂಭವವಿದ್ದು, ಇದನ್ನು ತಡೆಗಟ್ಟುವ ಸಲುವಾಗಿ ರೀ–ವೈಯರಿಂಗ್ ಮಾಡಿಸುವುದು ಅವಶ್ಯಕವಾಗಿದೆ. ಈ ಕೆಲಸ ಕಾರ್ಯಗಳಿಗೆ ಸರ್ಕಾರದ ಆರ್ಥಿಕ ನೆರವು ಅಗತ್ಯವಿದ್ದಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸಬೇಕಾಗುವುದು.

- ➢ ಉತ್ಪಾದನಾ ಘಟಕಗಳಲ್ಲಿ ದುರಸ್ಥಿಗೆ ಒಳಪಡುವ ಯಂತ್ರಗಳು ಯಾವ ಸಾಲಿನಲ್ಲಿ ಖರೀದಿಸಲಾಗಿದೆ ಎಂಬುದರ ಬಗ್ಗೆ ವಿವರ ನೀಡಿವುದು.
- ➢ ಈ ಯಂತ್ರಗಳ ಗ್ಯಾರಂಟಿ / ವಾರೆಂಟಿ ಅವಧಿ ತಿಳಿಸುವುದು.
- ➢ ಸದರಿ ಯಂತ್ರೋಪಕರಣಗಳು ಹಿಂದೆ ದುರಸ್ತಿಗೊಳಿಸಿದ ವಿವರ
- ➢ ದುರಸ್ಥಿಯನ್ನು ಕೈಗೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆ 1999ರ ಪ್ರಕಾರ ನಿಯಮಾನುಸಾರ ದುರಸ್ಥಿಗೆ ಕ್ರಮ ವಹಿಸುವುದು.
- ➢ ಯಂತ್ರಗಳು ದುರಸ್ಥಿಗೊಂಡ ನಂತರ ಉತ್ಪಾದನೆಯಲ್ಲಿ ಸಮರ್ಪಕವಾಗಿ ತೊಡಗಿದೆಯೇ ಎಂಬುದರ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ತದನಂತರ, ಬಿಲ್ಲಿನ ಮೊತ್ತ ಬಿಡುಗಡೆ ಮಾಡುವುದು.

ಈ) **ನಿಗಮದ ಉತ್ಪಾದನಾ ಘಟಕಗಳಿಗೆ ಹೆಚ್ಚಿನ ತಂತ್ರಜ್ಞಾನ ಹೊಂದಿದ ಹೊಸ ಯಂತ್ರೋಪಕರಣಗಳ ಅಳವಡಿಕೆ.**

ನಿಗಮದ ಉತ್ಪಾದನಾ ಘಟಕಗಳಲ್ಲಿ ಹೆಚ್ಚು ಉತ್ಪಾದನೆಗೆ ಕ್ರಮ ವಹಿಸುವ ನಿಟ್ಟಿನಲ್ಲಿ ಹಾಲಿಯಿರುವ ಯಂತ್ರಗಳ ಜೊತೆಗೆ ಹಾಗೂ ಅನುಪಯುಕ್ತ ಯಂತ್ರಗಳನ್ನು ವಿಲೇವಾರಿ ಮಾಡಿ, ಹೊಸ ತಂತ್ರಜ್ಞಾನವುಳ್ಳ ಹೆಚ್ಚುವರಿ ಯಂತ್ರಗಳನ್ನು ಅಳವಡಿಸುವುದು ಅನಿವಾರ್ಯವಾಗಿದೆ. ಇವುಗಳ ವೆಚ್ಚಕ್ಕೆ ನಿಗಮ / ಮಂಡಳಿಗಳು ಆರ್ಥಿಕವಾಗಿ ಸದೃಢತೆ ಹೊಂದದೆ ಇದಲ್ಲಿ, ಸರ್ಕಾರದಿಂದ ಆರ್ಥಿಕ ನೆರವು ನೀಡಬಹುದಾಗಿದೆ. ಯಂತ್ರೋಪಕರಣಗಳ ಖರೀದಿಗೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸುವುದು.

- ➢ ಯಂತ್ರೋಪಕರಣಗಳ ಖರೀದಿಗೆ ಸಂಬಂಧಿಸಿದಂತೆ ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸುವುದು.

- ❖ ಜಂಟಿ ನಿರ್ದೇಶಕರು, ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರ
- ❖ ವ್ಯವಸ್ಥಾಪಕ ನಿರ್ದೇಶಕರು, ತೆಂಗಿನ ನಾರಿನ ನಿಗಮ / ತೆಂಗಿನ ನಾರಿನ ಮಹಾಮಂಡಳಿ ಅಥವಾ ಅವರ ಪ್ರತಿನಿಧಿ
- ❖ ಉಪ ವ್ಯವಸ್ಥಾಪಕರು (ಖಾಗ್ರಾ), ಜಿಲ್ಲಾ ಪಂಚಾಯತ್.
- ❖ ನಿಗಮ / ಮಹಾಮಂಡಳಿಯ ಸಂಬಂಧಪಟ್ಟ ಅಧಿಕಾರಿ.

- ➢ ಮೇಲಿನ ಸಮಿತಿಯಲ್ಲಿ ಯಂತ್ರೋಪಕರಣಗಳ ಪಟ್ಟಿಗೆ ಅನುಮೋದನೆ ಪಡೆದು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ ಹೊಸ ಯಂತ್ರಗಳ ಖರೀದಿ ಬಗ್ಗೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಅನುಮೋದನೆ ಪಡೆಯತಕ್ಕದ್ದು.
- ➢ ಯಂತ್ರೋಪಕರಣಗಳ ಖರೀದಿಯನ್ನು ಕೆ.ಟಿ.ಪಿ.ಪಿ. ಕಾಯ್ದೆ 1999 ಮತ್ತು ಅದರಡಿ ರೂಪಿಸಿರುವ ನಿಯಮಗಳಂತೆ ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳನ್ನು ಮೇಲಿನ ಸಮಿತಿಯಲ್ಲಿ ಅಂತಿಮಗೊಳಿಸುವುದು.
- ➢ ಟೆಂಡರ್‌ನ ಷರತ್ತು ಮತ್ತು ನಿಬಂಧನೆಯಂತೆ ಯಂತ್ರೋಪಕರಣಗಳ ಸರಬರಾಜು ದಾರರಿಗೆ ಹಣ ಬಿಡುಗಡೆ ಮಾಡತಕ್ಕದ್ದು.

**ಉ) ನಿಗಮದ ಉತ್ಪಾದನಾ ಘಟಕಗಳ ಕಟ್ಟಡ ದುರಸ್ಥಿ ಮತ್ತು ನಿರ್ವಹಣೆಗೆ ಸಹಾಯ:**

ನಿಗಮ/ ಮಹಾಮಂಡಳಿಯ ಉತ್ಪಾದನಾ ಘಟಕಗಳ ಕಟ್ಟಡಗಳು ಹಳೆಯದಾಗಿದಲ್ಲಿ ಇವುಗಳ ಸಿವಿಲ್ ಮತ್ತು ವಿದ್ಯುತ್ ನಿರ್ವಹಣೆ ಕಾರ್ಯವನ್ನು ಕೈಗೊಳ್ಳಬೇಕಾಗಿದ್ದಲ್ಲಿ. ಇವುಗಳಿಗೆ ತಗಲುವ ವೆಚ್ಚವನ್ನು ನಿಗಮದ ಆರ್ಥಿಕ ಪರಿಸ್ಥಿತಿಯಲ್ಲಿ ಭರಿಸಲು ಸಾಮರ್ಥ್ಯವಿಲ್ಲದಿದರೆ. ಸರ್ಕಾರದ ಆರ್ಥಿಕ ನೆರವಿಗೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸುವುದು.

- ➢ ಉತ್ಪಾದನಾ ಘಟಕಗಳ ಕಟ್ಟಡಗಳ ದುರಸ್ಥಿಗೆ ಸಂಬಂಧಪಟ್ಟಂತೆ, ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯ ದರಗಳಂತೆ ಸರ್ಕಾರದ ಯಾವುದಾದರು ಇಲಾಖೆ / ಸಂಸ್ಥೆಗಳ ಇಂಜಿನಿಯರ್‌ಗಳಿಂದ ಸಿದ್ಧಪಡಿಸತಕ್ಕದ್ದು ಅಥವಾ ಪರಿಶೀಲನೆಗೆ ಒಳಪಡಿಸುವುದು.
- ➢ ದುರಸ್ಥಿಯನ್ನು ಕೈಗೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆ 1999ರ ಮತ್ತು ಆದರ ನಿಯಮದನ್ವಯ ದುರಸ್ಥಿಗೆ ಕ್ರಮ ವಹಿಸುವುದು.
- ➢ ಕಟ್ಟಡಗಳ ದುರಸ್ಥಿಯನ್ನು ಅಂದಾಜು ಪಟ್ಟಿಯಂತೆ ಕೈಗೊಳ್ಳಲಾಗಿದೆಯೇ ಹಾಗೂ ತೃಪ್ತಿಕರವಾಗಿದೆಯೇ ಎಂಬುದರ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ಹಾಗೂ ಈ ಸಂಬಂಧ ನೋಂದಾಯಿತ ಚಾರ್ಟರ್ಡ್ ಇಂಜಿನಿಯರ್ / ಸರ್ಕಾರದ ಇತರೆ ಇಲಾಖೆಗಳ ಇಂಜಿನಿಯರ್ ರವರಿಂದ ದೃಢೀಕರಣ ಪಡೆದು, ನಂತರ ಬಿಲ್ಲಿನ ಮೊತ್ತ ಬಿಡುಗಡೆ ಮಾಡಲು ಕ್ರಮ ವಹಿಸುವುದು.

**ಊ) ಹೊಸ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಯೋಜನಾ ವರದಿಗನುಗುಣವಾಗಿ ಆರ್ಥಿಕ ಸಹಾಯ:**

ಹೊಸ ಉತ್ಪಾದನಾ ಘಟಕಗಳ ಸ್ಥಾಪನೆಗೆ ಅವಶ್ಯಕವಿರುವ ಕಟ್ಟಡಗಳ ನಿರ್ಮಾಣ, ವಿದ್ಯುದ್ಧೀಕರಣ, ಕೊಳವೆ ಬಾವಿ ತಂತಿ ಬೇಲಿ ಹಾಗೂ ಇತರೆ ಮೂಲಭೂತ ಸೌಕರ್ಯ ಒದಗಿಸಲು ವಿವರವಾದ ವರದಿಯೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಆಯುಕ್ತರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಲ್ಲಿಸಿ ಮಂಜೂರಾತಿ ಪಡೆದು ಮುಂದಿನ ಕ್ರಮ

ವಹಿಸುವುದು. ಹೊಸ ಉತ್ಪಾದನಾ ಘಟಕಗಳನ್ನು ಸ್ಥಾಪನೆ / ಮೂಲಭೂತ ಸೌಕರ್ಯಗಳನ್ನು ಒದಗಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು.

1. ಹೊಸ ಉತ್ಪಾದನಾ ಘಟಕದ ಕಾರ್ಯಸಾಧ್ಯತಾ ವರದಿಯನ್ನು (Feasibility Report) ಸಿದ್ದಪಡಿಸಿ ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಿ ಸದರಿ ಉತ್ಪಾದನಾ ಘಟಕವು ಆರ್ಥಿಕವಾಗಿ ಕಾರ್ಯಸಾಧುವಾಗಿದಲ್ಲಿ (Financially Viable) ಮಂಡಳಿಯ ಅನುಮೋದನೆಯನ್ನು ಪಡೆಯತಕ್ಕದ್ದು.

2. ನಂತರ ಈ ಉತ್ಪಾದನಾ ಘಟಕದ ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸಿ ಈ ವರದಿಯಲ್ಲಿ ಉತ್ಪಾದನಾ ಘಟಕದ Financial Projections, Sustainability ಬಗ್ಗೆ ಸ್ಪಷ್ಟವಾಗಿ ವಿವರಿಸತಕ್ಕದ್ದು.

3. ಯೋಜನಾ ವರದಿಯನ್ನು ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಇವರ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಲ್ಲಿಸಿ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು.

4. ಅವಶ್ಯಕತೆ ಆಧಾರದ ಮೇಲೆ ಯೋಜನೆಗಳನ್ನು ಅನುಮೋದಿಸಲು ಸರ್ಕಾರದ ಮಟ್ಟದಲ್ಲಿ ಸಮಿತಿಯನ್ನು ರಚಿಸಿಕೊಳ್ಳಬಹುದಾಗಿದೆ.

5. ಸರ್ಕಾರದಿಂದ ಅನುಮೋದನೆ ಪಡೆದ ನಂತರ ಈ ಕೆಳಕಂಡ ಕಾರ್ಯ ವಿಧಾನದಂತೆ ಉತ್ಪಾದನಾ ಘಟಕದ ಕಾಮಗಾರಿಗಳನ್ನು ಪೂರೈಸತಕ್ಕದ್ದು.

➢ ಉದ್ದೇಶಿತ ಘಟಕದ ಕಟ್ಟಡ ನಿರ್ಮಾಣಕ್ಕೆ ನಿಗಮ / ಮಂಡಳಿಯು ಸ್ವಂತ ನಿವೇಶನವನ್ನು ಕಡ್ಡಾಯವಾಗಿ ಹೊಂದಿರಬೇಕು.
➢ ಕಟ್ಟಡಗಳ ನಿರ್ಮಾಣ ಹಾಗೂ ಇತರೆ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯ ದರಗಳಂತೆ ಅಂದಾಜು ಪಟ್ಟಿ ಹಾಗೂ ನಕ್ಷೆಯನ್ನು ನೋಂದಾಯಿತ ಚಾರ್ಟರ್ಡ್ ಇಂಜಿನಿಯರ್ / ಸರ್ಕಾರದ ಇತರೆ ಇಲಾಖೆಗಳ ಇಂಜಿನಿಯರ್‌ಗಳಿಂದ ಸಿದ್ದಪಡಿಸಿ ಅಥವಾ ಅವರ ಪರಿಶೀಲನೆಗೆ ಒಳಪಡಿಸಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಖೆಯ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.
➢ ಕಟ್ಟಡ ನಿರ್ಮಾಣ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆ 1999 ಮತ್ತು ಆದರ ನಿಯಮಗಳನ್ವಯ ಕ್ರಮ ಕೈಗೊಳ್ಳುವುದು.
➢ ಟೆಂಡರ್‌ನಲ್ಲಿ ಯಶಸ್ವಿಯಾದ ಗುತ್ತಿಗೆದಾರರು ಉದ್ದೇಶಿಸಿರುವ ಕಟ್ಟಡ ನಿರ್ಮಾಣ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಅನುಮೋದಿಸಲಾದ ಅಂದಾಜುಪಟ್ಟಿ ಹಾಗೂ ನಕ್ಷೆಯಂತೆ ಗುಣಮಟ್ಟದ ಕಾಮಗಾರಿಯನ್ನು ಕೈಗೊಂಡಿರುವ ಬಗ್ಗೆ ಚಾರ್ಟರ್ಡ್ ಇಂಜಿನಿಯರ್ / ಸರ್ಕಾರದ ಇತರೆ ಇಲಾಖೆಗಳ ಇಂಜಿನಿಯರ್ ರವರಿಂದ ಹಾಗೂ ನಿಗಮದ ಸಂಬಂಧಪಟ್ಟ ಅಧಿಕಾರಿ / ಸಿಬ್ಬಂದಿಯವರಿಂದ ದೃಢೀಕರಿಸಿ, ಬಿಲ್ಲನ್ನು ಹಣ ಪಾವತಿಗಾಗಿ ಸಲ್ಲಿಸುವುದು.

- ಹಣ ಪಾವತಿಯನ್ನು ಹಂತ ಹಂತವಾಗಿ ಪರಿಶೀಲಿಸಿ ಬಿಡುಗಡೆ ಮಾಡಬಹುದು.
- ತೆಂಗಿನ ನಾರಿನ ನಿಗಮ / ಮಹಾಮಂಡಳಿಗಳು ಆ ಸಾಲಿನಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಸಲ್ಲಿಸತಕ್ಕದ್ದು.
- ಆಯುಕ್ತರು, ಕೈಗಾರಿಕಾಭಿವೃದ್ಧಿ ಮತ್ತು ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಕ್ರಿಯಾ ಯೋಜನೆಯ ಅನುಮೋದನೆಗೆ ಸಮಿತಿಯನ್ನು ರಚಿಸಿಕೊಳ್ಳತಕ್ಕದ್ದು.
- ಅನುಮೋದಿತ ಕ್ರಿಯಾ ಯೋಜನೆಯಂತೆ ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

## ಊ) ಎಂಎಸ್‌ಎಂಇ ಮಂತ್ರಾಲಯ, ನವದೆಹಲಿ ರವರ ಕೇಂದ್ರ ಪರಿಷ್ಕೃತ ಸ್ಫೂರ್ತಿ ಯೋಜನೆ

(Scheme of Fund for Regeneration of Traditional Industries (SFURTI)

ಹಿನ್ನೆಲೆ:-

ಭಾರತ ಸರ್ಕಾರದ ಕ್ಲಸ್ಟರ್ ಅಭಿವೃದ್ಧಿ ಯೋಜನೆಯು ಒಂದೇ ಸ್ಥಳದಲ್ಲಿ ಒಂದೇ ತರಹದ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ಸೂಕ್ಷ್ಮ ಹಾಗೂ ಸಣ್ಣ ಕೈಗಾರಿಕೆಗಳನ್ನು ಗುರ್ತಿಸಿ, ಚಟುವಟಿಕೆಗೆ ಅವಶ್ಯವಿರುವ ಸಾಮೂಹಿಕ ಸೌಲಭ್ಯ ಕೇಂದ್ರವನ್ನು ಸ್ಥಾಪಿಸಿ ಅಗತ್ಯವಿರುವ ಸೇವಾ ಸೌಲಭ್ಯಗಳನ್ನು ಪಡೆದು ನಿರಂತರ ಉದ್ಯೋಗ ಕಲ್ಪಿಸುವುದು, ಮಾರುಕಟ್ಟೆ ಪ್ರೋತ್ಸಾಹ, ಉತ್ಪನ್ನಗಳ ಮೌಲ್ಯ ಹೆಚ್ಚಿಸುವ ಹಾಗೂ ಸದರಿ ಕ್ಲಸ್ಟರ್‌ನ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾಯರ್ ಕುಶಲ ಕರ್ಮಿಗಳಿಗೆ ಕೌಶಲ್ಯ ಉನ್ನತೀಕರಣ ಇತರೆ ಕಾರ್ಯಕ್ರಮಗಳು ಸ್ಫೂರ್ತಿ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ತೆಂಗಿನ ನಾರಿನ ಉದ್ಯಮದ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರದ ಸೌಮ್ಯದ ಸಂಸ್ಥೆಗಳಾದ ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿ., ಹಾಗೂ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮಗಳ ಪ್ರಸ್ತಾವನೆಗಳು ಭಾರತ ಸರ್ಕಾರದ ಈ ಯೋಜನೆ ಅಡಿಯಲ್ಲಿ ಅನುಮೋದನೆಗೊಂಡಲ್ಲಿ ಈ ಅನುಷ್ಠಾನ ಸಂಸ್ಥೆಗಳು ತಮ್ಮ ವಂತಿಕೆಯನ್ನು ಹೂಡುವಲ್ಲಿ ಆರ್ಥಿಕವಾಗಿ ಸಾಮರ್ಥ್ಯ ಹೊಂದದೆ ಇದ್ದ ಪಕ್ಷದಲ್ಲಿ ಅನುಷ್ಠಾನ ಸಂಸ್ಥೆಗಳ ವಂತಿಕೆ ಶೇಕಡ 25ರಷ್ಟನ್ನು ರಾಜ್ಯ ಸರ್ಕಾರದಿಂದ ಭರಿಸಬಹುದಾಗಿದೆ.

ಯೋಜನೆ ಅನುಷ್ಠಾನ:-

- ಸ್ಫೂರ್ತಿ ಯೋಜನೆ ಮಾರ್ಗಸೂಚಿಯಂತೆ ಕೇಂದ್ರ ಸರ್ಕಾರದಿಂದ ಅಂತಿಮ ಅನುಮೋದನೆ ಪಡೆದ ಯೋಜನೆಗಳಿಗೆ ಅನುಷ್ಠಾನ ಸಂಸ್ಥೆಗಳು ಹೂಡಿಕೆ ಮಾಡಬಹುದಾದ ವಂತಿಕೆಯನ್ನು ಭರಿಸಲು ಅಶಕ್ತವಾದಲ್ಲಿ ರಾಜ್ಯ ಸರ್ಕಾರದಿಂದ ಈ ಯೋಜನೆಯಡಿ ಅನುದಾನ ಬಿಡುಗಡೆಗೆ ಪ್ರಸ್ತಾವನೆಯನ್ನು ಆಯುಕ್ತರು, ಕೈಗಾರಿಕಾಭಿವೃದ್ಧಿ ಇವರ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.

ಈ ಯೋಜನೆಯ ಮಾರ್ಗಸೂಚಿ ಕುರಿತಂತೆ ಹಿಂದೆ ಸರ್ಕಾರದಿಂದ ಹೊರಡಿಸಲಾಗಿರುವ ಎಲ್ಲಾ ಆದೇಶಗಳನ್ನು ರದ್ದುಪಡಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 310 ವೆಚ್ಚ-1/2016, ದಿನಾಂಕ: 27.08.2016 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 29 ಎಫ್‌ಆರ್‌ಓ 2016, ದಿನಾಂಕ: 10.08.2016 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
30.08.2016
[ಎಲ್.ಎಸ್. ಶ್ರೀಕಂಠಬಾಬು]
ಸರ್ಕಾರದ ಅಧೀನ ಕಾರ್ಯದರ್ಶಿ [ಸಪ್ರಕೈ],
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:

**ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿ ಕಳುಹಿಸಲಾಗಿದೆ. ತದನಂತರ, ಪ್ರಕಟಗೊಂಡ ಸಂಚಿಕೆಗಳ 25 ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿದೆ.**

ಪ್ರತಿಯನ್ನು:

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
2) ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
3) ಪ್ರಧಾನ ಮಹಾಲೇಖಪಾಲರು (ಎ &ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು – 560001.
4) ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
5) ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ವಿ.ಐ.ಟಿ.ಸಿ. ಕಟ್ಟಡ, ಕಸ್ತೂರ್ ಬಾ ರಸ್ತೆ, ಬೆಂಗಳೂರು.
7) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಲ (ನಿ), ನಂ. 953(ಎ), 2ನೇ ಮುಖ್ಯರಸ್ತೆ, 4ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನಸೌಧ, ಬೆಂಗಳೂರು.
9) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
10) ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು ಮತ್ತು ಸಮನ್ವಯ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
11) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.